**ಹೆಂಡತಿ:** ರೀ, ಈ ಜಗತ್ತಿನಲ್ಲಿ ನಮಗಾಗಿ ಪ್ರಾಣ ಕೊಡುವವರು ಇದ್ದಾರಾ?
**ಗಂಡ:** ಇಲ್ಲದೆ ಏನು? ಕುರಿ, ಕೋಳಿ, ಮೀನುಗಳು!


**ತಿಮ್ಮ:** ಸದಾ ಮೌನವಾಗಿರುವ ಗುಣ ಹೊಂದಿರುವ ಹೆಂಡತಿ ಸಿಕ್ಕರೆ ಅವಳನ್ನು ಏನೆಂದು ಹಾಡಿ ಹೊಗಳಲಿ?
**ನೀರಜ್:** ಮೌನವೇ ಆಭರಣ, ಮುಗುಳ್ನಗೆ ಶಶಿಕಿರಣ.


**ನಂಜ:** ಕಥೆಗಳನ್ನು ಹೇಳುತ್ತಿದ್ದ ಅಜ್ಜಿಯರು ಎಲ್ಲೂ ಕಾಣುತ್ತಿಲ್ಲವಲ್ಲ?
**ಮಂಜ:** ಅವರೆಲ್ಲ ಟೀವಿ ಧಾರಾವಾಹಿ ನೋಡುತ್ತಿದ್ದಾರೆ.

**ಹೆಂಡತಿ:** ಗಂಡಸರಿಗೆ ಎಲ್ಲಿ ಮತ್ತು ಯಾವಾಗ ಮದುವೆಯಾದೆ ಎಂಬುದು ನೆನಪಿರುತ್ತಂತೆ ಹೌದೇನ್ರೀ?
**ಗಂಡ:** ಹೌದು, ಆದರೆ ಏಕೆ ಮದುವೆಯಾದೆ ಎಂಬುದು ನೆನಪಿರುವುದಿಲ್ಲ.

**ಹೆಂಡತಿ:** ರೀ, ನನಗೆ ವಯಸ್ಸಾಗುತ್ತಿದೆ ಎಂಬ ಚಿಂತೆ ಆಗುತ್ತಿದೆ.
**ಗಂಡ:** ನೀನು ವೈನ್ ಆಗಿ ಹುಟ್ಟಬೇಕಿತ್ತು. ಎಷ್ಟೇ ವಯಸ್ಸಾದ್ರೂ ಹಾಗೇ ಇರ್ತಿದ್ದೆ.

ಸಂಗ್ರಹ: ವಿ. ಹೇಮಂತ ಕುಮಾರ್, ಬೆಂಗಳೂರು




**ಕೇಶವ:** ಅಶೋಕ, ನಿಮ್ಮ ಮನೆಯಲ್ಲಿ ಯಾರು ಸೂಪರ್ ಪವರ್?
**ಅಶೋಕ:** ನಾನೇ ಸೂಪರ್ ಪವರ್. ಆದರೆ ನನ್ನ ಸೂಪರ್ ಪವರ್‌ನ ಕಂಟ್ರೋಲ್ ಮಾತ್ರ ಹೆಂಡತಿ ಕೈಯಲ್ಲಿದೆ.

**ಅರವಿಂದ:** ಮೌರ್ಯ, ನೀನು ಇಷ್ಟು ದೊಡ್ಡ ವಿದ್ಯಾವಂತನಾಗಿ, ಒಂದು ದೊಡ್ಡ ಹುದ್ದೆಗೆ ಸೇರಿಕೊಳ್ಳುವುದಕ್ಕೆ ಹೇಗೆ ಸಾಧ್ಯವಾಯಿತು?
**ಮೌರ್ಯ:** ಅಪ್ಪ ಅಮ್ಮ ಯಾವಾಗಲೂ ನೀನು ಸರಿಯಾಗಿ ಓದದೆ ಹೋದ್ರೆ ಮದುವೆ ಮಾಡಿಬಿಡ್ತೇವೆ ಅಂತ ಹೇಳ್ತಾನೇ ಇದ್ರು. ಅದಕ್ಕೇ ಸರಿಯಾಗಿ ಓದಿದೆ ಅಷ್ಟೇ.

**ನಾಗೇಶ:** 'ಎತ್ತಿಗೆ ಜ್ವರ ಬಂದ್ರೆ, ಎಮ್ಮೆಗೆ ಬರೆ ಎಳೆದ್ರು' ಅನ್ನುವ ಗಾದೆಗೆ ಒಂದು ಉದಾಹರಣೆ ಹೇಳು.
**ಯೋಗೇಂದ್ರ:** ನೀನು ಬಾಸ್ ಹತ್ತಿರ ಬೈಸಿಕೊಂಡಾಗ, ಮನೆಗೆ ಹೋಗಿ ನಿನ್ನ ಹೆಂಡತಿಯನ್ನು ಬೈಯೋದು.

**ನಂಜ:** ಈಗಿನ ಕಾಲದಲ್ಲಿ ಯಾರೂ ಪ್ರೇಮ ಪತ್ರವನ್ನೇ ಬರೆಯುವುದಿಲ್ಲವಲ್ಲ?
**ಮಂಜ:** ಬರೆಯುತ್ತಾರೆ. ಆದರೆ ಹುಡುಗಿಯರಿಗೆ ಓದಲು ಪುರುಸೊತ್ತು ಇಲ್ಲವಂತೆ.

**ಗಿರಿಜಾ:** ಆಶಾ, ನಿನ್ನ ಗಂಡ ಕುಡಿಯೋದನ್ನ ಹೇಗೆ ಬಿಡಿಸಿದೆ?
**ಆಶಾ:** ಹೊರಗಡೆ ಕುಡಿಯಬೇಡಿ, ಮನೆಗೆ ತನ್ನಿ ಇಬ್ಬರೂ ಸೇರಿ ಕುಡಿಯೋಣ ಅಂದೆ ಅಷ್ಟೆ.

**ಆಕೆ:** ನಿಮ್ಮ ಮಗಳು, ನಮ್ಮನೆ ಸೊಸೆಯಾಗಿ ಬಂದ ಮೇಲೆ ನಮ್ಮನೆಯನ್ನು ನಿಜಕ್ಕೂ ಬೆಳಗುತ್ತಾಳಾ?
**ಈಕೆ:** ಮನೆ ಬೆಳಗುತ್ತಾಳೋ, ಇಲ್ಲವೋ ಗೊತ್ತಿಲ್ಲ. ಆದರೆ ನಮ್ಮ ಮಗಳಿಂದ ಪಾತ್ರೆ ಮಾತ್ರ ಬೆಳಗಿಸಬೇಡಿ.

**ವಿಶ್ವಾಸ್:** ನೋಡು ಶ್ರೀಪತಿ, ಇಲ್ಲಿ ಯಾವುದೂ ಶಾಶ್ವತವಲ್ಲ ಅಂತ ನನಗೆ ಗೊತ್ತಾಯ್ತು.
**ಶ್ರೀಪತಿ:** ಹೇಗೆ ಗೊತ್ತಾಯ್ತು?
**ವಿಶ್ವಾಸ್:** ನೋಡೋ, ನಿನ್ನೆ ತನಕ ಲಲಿತ ನನ್ನ ಪ್ರೀತಿಸ್ತಾ ಇದ್ದಳು. ಇವತ್ತು ಆ ಕಿಶೋರನನ್ನು ಪ್ರೀತಿಸ್ತಾ ಇದ್ದಾಳೆ.

**ಲಕ್ಷ್ಮಿ:** ಸೌಂದರ್ಯ, ನಿಮ್ಮತ್ತೆ ತಿನ್ನೋದು ಕಡಿಮೆ ಮಾಡಿದ್ದಾರಂತೆ, ಯಾಕೆ?
**ಸೌಂದರ್ಯ:** ಹೌದು ಕಣೆ. ತಿನ್ನೋದೇನೋ ಕಡಿಮೆ ಮಾಡಿದ್ದಾರೆ. ಆದರೆ ಮನೆಗೆ ಬಂದವರ ತಲೆ ತಿನ್ನೋದನ್ನು ಜಾಸ್ತಿ ಮಾಡಿದ್ದಾರೆ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ